

# ಬೋಧನೆ ಉಪ್ಪಿನಂತೆ...

**ಮಕ್ಕಳ ಕುರಿತು ಎದುರಾಗುವ ಸಲಹೆಗಳನ್ನು ಪೋಷಕರು ಕುರುಡಾಗಿ ಅನುಸರಿಸದೆ, ವಿವೇಚನೆಯೊಂದಿಗೆ ಸ್ವೀಕರಿಸಿದರೆ ಚೆನ್ನ.**

■ ಸ್ವಯಂಪ್ರಭಾ

ಮಕ್ಕಳನ್ನು ಬೆಳೆಸುವುದು ಹೇಗೆ ಎಂಬ ಬಗ್ಗೆ ಇತ್ತೀಚೆಗೆ ಎಲ್ಲರಲ್ಲಿಯೂ ಕುತೂಹಲ. ಒಂದೆಡೆ ಅವಿಭಕ್ತ ಕುಟುಂಬಗಳ ಸಂಖ್ಯೆ ಕಡಿಮೆಯಾಗುತ್ತಿದ್ದಂತೆಯೇ, ಅದರ ನೇರ ಪರಿಣಾಮ ಮಕ್ಕಳ ಬಾಲ್ಯದ ಮೇಲೆ ಬೀಳುತ್ತಿದೆ. ಪುಟಾಣಿಗಳು ಕೇವಲ ಅಮ್ಮ ಮತ್ತು ಅಪ್ಪನ ಮಾತುಗಳನ್ನಷ್ಟೇ ಕೇಳಬೇಕಾಗುತ್ತದೆ. ಅಪ್ಪ ಅಮ್ಮನ ಬೈಗುಳ ಕೇಳಿ ನೊಂದ ಮನಸ್ಸಿಗೆ ಸಾಂತ್ವನ ಹೇಳುವುದಕ್ಕೆ ಮನೆಯಲ್ಲಿ ಬೇರೆ ಯಾರೂ ಲಭ್ಯರಿರುವುದಿಲ್ಲ. ಮತ್ತೊಂದೆಡೆ, ಮಕ್ಕಳ ಕೆಲವು ವರ್ತನೆಗಳ ಬಗ್ಗೆ ಅಪ್ಪ–ಅಮ್ಮನಿಗೆ ಸಲಹೆಗಳನ್ನು ಕೊಡಲು ಮನೆಯಲ್ಲಿ ಹಿರಿಯರು ಇರುವುದಿಲ್ಲ. ಹಾಗಾಗಿ, ಅವರು ಪೇರೆಂಟಿಂಗ್ ಸಲಹೆಗಳತ್ತ ಮುಖ ಮಾಡುವುದು ಅನಿವಾರ್ಯವಾಗಿರುತ್ತದೆ. ಅಷ್ಟೇ ಅಲ್ಲ, ತಮ್ಮ ಸಹೋದ್ಯೋಗಿಗಳು, ಜೊತೆಗಾರರ ಮಕ್ಕಳು ಹೇಗೆ ಮುಂದುವರೆಯುತ್ತಿದ್ದಾರೆ ಎಂದು ಗಮನಿಸುವ, ಕೇಳುವ ಕುತೂಹಲವೂ ಯುವ ಪೋಷಕರ ಮನಸ್ಸಿನಲ್ಲಿ ಇರುತ್ತದೆ. ಪಾಲನೆ ಪೋಷಣೆಗೆ ಬೇಕಾದ ಸಲಹೆ ಸೂಚನೆಗಳನ್ನು ಪಡೆಯುವುದಕ್ಕೆ ಯುವ ಪೋಷಕರಿಗೆ ಬಹಳವೇ ಉಮೇದು ಇರುತ್ತದೆ. ಈ ಬಗ್ಗೆ ಬೋಧನೆ ಮಾಡುವವರೂ ಬಹಳ ಉತ್ಸಾಹದಿಂದ ಒಂದಲ್ಲಾ ಒಂದು ಸಲಹೆಗಳನ್ನು ಕೊಡುತ್ತಲೇ ಇರುತ್ತಾರೆ. ಹೀಗೆ ಸಲಹೆ ಕೊಡುವ ಭರಾಟೆಯಲ್ಲಿ ಸಲಹೆಗಳನ್ನು ಸ್ವೀಕರಿಸುವವರ ಮನಸ್ಥಿತಿಯ ಬಗ್ಗೆ ಹೆಚ್ಚಿನವರು ಯೋಚನೆ ಮಾಡಲು ಮುಂದಾಗುವುದಿಲ್ಲ.

ಮೊನ್ನೆ ಸತೀಶನಿಗೊಂದು ಅನುಭವವಾಯಿತು. ಸಹೋದ್ಯೋಗಿಯೊಬ್ಬರು ಕಚೇರಿಯಲ್ಲಿ ಮಾತನಾಡುತ್ತ, ತಮ್ಮ ಮಗ ಒಲಿಂಪಿಯಾಡ್ ಪರೀಕ್ಷೆಯನ್ನು ಎಷ್ಟೊಂದು ಸೀರಿಯಸ್ಸಾಗಿ ತೆಗೆದುಕೊಂಡು ಓದುತ್ತಿದ್ದಾನೆ ಎಂಬ ಬಗ್ಗೆ ದೊಡ್ಡ ಧ್ವನಿಯಲ್ಲಿ ಹೇಳಿಕೊಳ್ಳುತ್ತಿದ್ದರು. ಅವರ ಮಗನ ಸಾಧನೆಯನ್ನು ಕಂಡು ಸತೀಶನಿಗೆ ನಿಜಕ್ಕೂ ಮನಸ್ಸು ತುಂಬಿ ಬಂತು. ಆದರೆ ಮಗನ ಹೊಗಳಿಕೆಯು ಅಷ್ಟಕ್ಕೇ ನಿಂತಿದ್ದರೆ ಉತ್ತಮವಿತ್ತು. ತಾವು ಭಾಗವಹಿಸಿದ ಪೇರೆಂಟಿಂಗ್ ತರಗತಿಗಳು, ಅಲ್ಲಿ ದೊರೆತ ಟಿಪ್ಸ್‌ಗಳು, ಅದರ ದೆಸೆಯಿಂದಾಗಿಯೇ ಮಗ ಬಹಳ ಚುರುಕುಮತಿ ಎನಿಸಿಕೊಂಡು ಈ ಹಂತಕ್ಕೆ ಬೆಳೆಯಲು ಕಾರಣವಾಗಿದ್ದರ ಬಗ್ಗೆ ವಿವರಿಸತೊಡಗಿದರು.

‘ಬರೀ ಮಕ್ಕಳನ್ನು ಹುಟ್ಟಿಸಿಬಿಟ್ಟರೆ ಸಾಲದು ಎಂದು ಹಿಂದಿನವರು ಹೇಳುತ್ತಿದ್ದರು. ಇಂದು ಹಾಗಲ್ಲ, ಮಕ್ಕಳು ಹುಟ್ಟುವ ಮೊದಲೇ ಸರಿಯಾದ ಯೋಜನೆಗಳನ್ನು ಅವರ ಬದುಕಿಗಾಗಿ ರೂಪಿಸಬೇಕು...’ ಎಂದೆಲ್ಲ ತಾವು ಮಾಡಿರುವ ಪೋಷಣೆಯ ಕೆಲಸಗಳ ಬಗ್ಗೆ ಹೇಳಿಕೊಳ್ಳಲಾರಂಭಿಸಿದರು. ಇದನ್ನೆಲ್ಲ ಕೇಳಿಸಿಕೊಳ್ಳುತ್ತಿರುವ ಸತೀಶನಿಗೆ ಇಬ್ಬರು ಹೆಣ್ಣುಮಕ್ಕಳಿದ್ದರು. ದೊಡ್ಡವಳು ಮೂರನೇ ತರಗತಿಯಲ್ಲಿ ಓದುತ್ತಿರುವ ಚೂಟಿ ಹುಡುಗಿ. ಎರಡನೆಯವಳು, ನಾಲ್ಕು ವರ್ಷವಾದರೂ ಕಾಲುಗಳಲ್ಲಿ ಬಲವಿಲ್ಲದೇ ನಡೆಯುವುದಕ್ಕೆ ಪ್ರಯತ್ನಿಸುತ್ತಿದ್ದ ಪುಟಾಣಿ ಕಂದ. ತನ್ನ ಮಗಳು ಚೆನ್ನಾಗಿ ನಡೆದಾಡುವಂತಾಗಲಿ ಎಂಬ ಆಶಯದಿಂದ ಅತ್ತ ಅಲೋಪತಿ ಔಷಧಿಗಳು, ಫಿಸಿಯೋಥೆರಪಿ ಚಿಕಿತ್ಸೆಗಳು, ಇತ್ತ ಆಯುರ್ವೇದ ಎಣ್ಣೆ ಮುಂತಾದ ಚಿಕಿತ್ಸೆಗಳನ್ನು ಮಾಡುತ್ತಾ ಮೌನವಾಗಿದ್ದ. ಎರಡನೇ ಮಗಳ ಬಗ್ಗೆ ಹೆಚ್ಚೇನೂ ಮಾತನಾಡದೇ ಇರುತ್ತಿದ್ದ ಅವನಿಗೆ ಸಹೋದ್ಯೋಗಿ ಹೇಳುತ್ತಿದ್ದ ಒಲಿಂಪಿಯಾಡ್ ಪರೀಕ್ಷೆಯೂ, ಮಗನ ಸ್ವತಂತ್ರ ಜೀವನದ ಕನಸಿನ ಬಗ್ಗೆಯೂ ಕೇಳಿಸಿಕೊಳ್ಳುವುದಕ್ಕೆ ಕಷ್ಟವಾಗಲಿಲ್ಲ. ಆದರೆ ತಮ್ಮ ಪೂರ್ವ ತಯಾರಿ, ಶ್ರಮದಿಂದಲೇ ಮಗ ಇಷ್ಟೆಲ್ಲ ಸಾಧಿಸುವುದಕ್ಕೆ ಅನುಕೂಲವಾಯಿತು ಎನ್ನುವ ಮಾತುಗಳನ್ನು ಸ್ವೀಕರಿಸಲು ಕಷ್ಟವಾಯಿತು. ಎಲ್ಲ ವಿಚಾರಗಳಿಗೆ ಅಹುದಹುದು ಎಂಬಂತೆ ತಲೆಯಾಡಿಸಿ ಸತೀಶ ತನ್ನ ಸೀಟಿಗೆ ಹೋಗಿ ಕುಳಿತುಬಿಟ್ಟ. ತಾನು ಸರಿಯಾಗಿ ಕಾಳಜಿ, ಪೂರ್ವತಯಾರಿ ಮಾಡಲಿಲ್ಲವೇ ಎಂಬ ಯೋಚನೆಯೊಂದು ಹಾದು ಹೋಗಿ ಮನಸ್ಸು ಮುದುಡಿತು.

ಪೂರ್ವ ತಯಾರಿಯ ಜಿಜ್ಞಾಸೆ ಮಕ್ಕಳ ವಿಚಾರಕ್ಕಷ್ಟೇ ಸೀಮಿತವಾದ ವಿಷಯವೆನ್ನುವಂತಿಲ್ಲ. ಹೊಗಳಿಕೊಳ್ಳುವಿಕೆ, ಸಂಭ್ರಮಿಸುವಿಕೆಯ ಸಂದರ್ಭದಲ್ಲಿ ಚಿಕ್ಕದೊಂದು ಕಾಳಜಿಯ ಎಳೆಯು ಎದೆಯಲ್ಲಿದ್ದರೆ ಚಂದ. ತನ್ನ ಮಾತುಗಳನ್ನು ಕೇಳಿಸಿಕೊಳ್ಳುತ್ತಿರುವವರ ಮನಸ್ಥಿತಿ, ಪರಿಸ್ಥಿತಿ ಹೇಗಿದೆಯೋ ಎಂಬೊಂದು ‘ಅಂತರ’ವನ್ನು ಕಾಪಾಡಿಕೊಂಡೇ ಮಾತುಗಳನ್ನು ಹೇಳುವುದೊಳಿತು. ಇದು ಮಕ್ಕಳ ವಿಚಾರದಲ್ಲಿ ಇನ್ನಷ್ಟು ಮುಖ್ಯವಾದ ವಿಷಯವೆನಿಸುತ್ತದೆ.

‘ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ’ ಎಂಬುದು ಶಂಕಾರಾಚಾರ್ಯರು ರಚಿಸಿದ ಸ್ತೋತ್ರವೊಂದರ ಸಾಲು. ಕೆಟ್ಟ ಮಗನಿದ್ದರೂ, ಕೆಟ್ಟ ತಾಯಿ ಇರಲು ಸಾಧ್ಯವಿಲ್ಲ ಎನ್ನುವ ಅರ್ಥದ ಸಾಲಿದು. ಅಷ್ಟೇ ಅಲ್ಲ, ಜಗತ್ತಿನಲ್ಲಿ ಎಂತಹ ವೃತ್ತಿಯ, ಮನಸ್ಥಿತಿಯ ಪೋಷಕರೇ ಇರಲಿ, ತಮ್ಮ ಮಕ್ಕಳು ಮಾತ್ರ ಸತ್ಕಾರ್ಯಗಳನ್ನೇ ಮಾಡಲಿ, ಸರಿಯಾದ ದಾರಿಯಲ್ಲಿಯೇ ನಡೆಯಲಿ ಎಂದು ಬುದ್ಧಿ ಮಾತು ಹೇಳುತ್ತಾರೆ ಅಲ್ಲವೇ. ಆದ್ದರಿಂದ ಮಕ್ಕಳ ಯಶಸ್ಸಿಗೆ ಹತ್ತಾರು ಕಾರಣಗಳು ಇರಬಹುದು. ಅವುಗಳಲ್ಲಿ ಒಂದು ಕಾರಣವು ಪೋಷಕರ ಪ್ರೋತ್ಸಾಹವೂ ಆಗಿರುತ್ತದೆ.

ಅದೇನೇ ಇರಲಿ. ಮಕ್ಕಳ ಕುರಿತಂತೆ ಎದುರಾಗುವ ಸಲಹೆಗಳನ್ನು ಪೋಷಕರು ವಿವೇಚನೆಯೊಂದಿಗೆ ಸ್ವೀಕರಿಸಿದರೆ ಚೆನ್ನ. ಎಷ್ಟುಬೇಕೋ ಅಷ್ಟರ ಮಟ್ಟಿಗೆ ಸಲಹೆಗಳನ್ನು ಅಳವಡಿಸಿಕೊಳ್ಳಬಹುದು. ಮಗುವಿನ ಪರಿಸ್ಥಿತಿ, ಒಳಿತು, ಕೆಡುಕುಗಳು ಪೋಷಕರಿಗೆ ಗೊತ್ತಿದ್ದಷ್ಟು ಇನ್ನಾರಿಗೆ ತಾನೇ ತಿಳಿದಿರಲು ಸಾಧ್ಯ. ಆ ಮಟ್ಟಿಗಿನ ವಿಶ್ವಾಸವೊಂದು ಪೋಷಕರ ಎದೆಯಲ್ಲಿರಲಿ.

ಪ್ರತಿಕ್ರಿಯಿಸಿ: feedback@sudha.co.in